OS No.6/2015 DW-2

**ದಿನಾಂಕ 01.07.2026 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಹೆಚ್ ಕೆ ಜಿ ವಕೀಲರಿಂದಃ**

ದಾವಾ ಸ್ವತ್ತನ್ನು ನನ್ನ ತಂದೆ ತಾಯಿ 1993-94 ರಲ್ಲಿ ಗೋವಿಂದೇಗೌಡರವರಿಂದ ಖರೀದಿ ಮಾಡಿರುತ್ತಾರೆ. ಗೋವಿಂದೇಗೌಡರವರು ಪ್ರಸ್ತುತ ದಾವಾವನ್ನು ಹಾಕಿರುತ್ತಾರೆ. ಗೋವಿಂದೇಗೌಡರವರು ಸಹೋದರಿಯವರು ಸಹ ಖರೀದಿ ಮಾಡಿಕೊಟ್ಟಿರುತ್ತಾರೆ. ದಾವಾ ಆಸ್ತಿ ಪಿತ್ರಾರ್ಜಿತ ಆಸ್ತಿ ಆಗಿರುತ್ತದೆ. ಗೋವಿಂದೇಗೌಡರವರಿಗೆ ದಾವಾ ಆಸ್ತಿ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ ಮತ್ತು ದಾಖಲೆ ನೋಡಿಲ್ಲ. 9ನೇ ಪ್ರತಿವಾದಿಯವರ ಪರ ಸಾಕ್ಷಿ ನುಡಿಯುತ್ತಿದ್ದೇನೆ. ನಾನು 1 ಮತ್ತು 5 ನೇ ಪ್ರತಿವಾದಿಯ ಪರ ಸಾಕ್ಷಿ ನುಡಿಯುತ್ತಿಲ್ಲ. ಗೋವಿಂದೇಗೌಡರವರ ತಂದೆ ಹೆಸರು ಗೊತ್ತಿಲ್ಲ. 1 ಮತ್ತು 9 ನೇ ಪ್ರತಿವಾದಿ ದಾವಾ ಆಸ್ತಿಯ ಸ್ವಾದೀನದಲ್ಲಿದ್ದು ಬೇರೆ ಯಾರು ಇಲ್ಲ. ದಾವಾ ಆಸ್ತಿಯನ್ನು ಪಕ್ಷಗಾರರು ಮಾರಾಟ ಮಾಡಿದ ಬಗ್ಗೆ ತಿಳಿದುಕೊಂಡಿರುತ್ತೇನೆ. ವಿಜಯಮ್ಮ ರವರು ತಮ್ಮ ಆಸ್ತಿಯನ್ನು ಮಾರಾಟ ಮಾಡಿಕೊಂಡಿರುತ್ತಾರೆ. 16 ನೇ ಪ್ರತಿವಾದಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ಪಕ್ಷಗಾರರು ಒಟ್ಟು ಕುಟುಂಬದಲ್ಲಿದ್ದಾಗ ನನ್ನ ತಂದೆ ಖರೀದಿ ಮಾಡಿದ್ದಾರೆಂದರೆ ಸುಳ್ಳು. ನನಗೆ ದಾವಾ ಸ್ವತ್ತಿನ ಮೇಲೆ ಯಾವುದೇ ಹಕ್ಕು ಇಲ್ಲ ಮತ್ತು ನಾನು 9ನೇ ಪ್ರತಿವಾದಿಯವರ ಪರವಾಗಿ ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಎಂದರೆ ಸುಳ್ಳು.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ.ಹೇ.ಕೇ.ಸ.ಒ

(ವೆಂಕಟೇಶಪ್ಪ. ವಿ)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.